ರೈಲ್ವೆ ಇಲಾಖೆ.

ನಂ. 308, ತಾರೀಖು 13ನೆ ಡಿಸೆಂಬರ್ 1906.

ಮೈಸೂರು ಶ್ರೀಮತ್ ಮಹಾರಾಜ ಸರಕಾರದವರು ಮತ್ತು ಶಿವಮೊಗ್ಗಾ ಮುನಿಸಿಪಲ್ ಬೋರ್ಡಿನವರ ಅರಾದೆಯನ್ನು ಪಡದು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷ್ನ್ 4ನೆ ಪ್ರಕರಣವನ್ನನುಸರಿಸಿ ಕುಂಸಿಯಿಂದ ಶಿವಮೊಗ್ಗಾ ರೈಲ್ವೆ ಸ್ಟೇಷ್ನ್ ವರಿಗೆ ಬಾಟುಮಾರ್ಗದ ಪಕ್ಕದಲ್ಲಿ ಉದ್ದಕ್ಕು ಎತ್ತುಗಳು ಅಥವಾ ಮನುಷ್ಯರಿಗೆಯಿಂದ ಯಳೆಯಲ್ಪಡುವ ಮೂನೋರೇಲ್ ಟ್ರಾಮುಲೈನನ್ನು ಹಂಗಾಮಿಯಾಗಿ ಹಾಕಿಕೊಳ್ಳಲು ಮಂಜೂರಿ ಹುಕ್ಕುಂ ಬ್ಯಗ್ಗೆ ಬೆಂಗಳೂರು ಇಂಗ್ಲೀಷು ವೇರ್‌ಹೌಸ್ ಜನರಲ್ ಮರಜೆಂಟು ಮತ್ತು ಬ್ಯಾಂಕರ್ ಮಿಸ್ಟರ್ ಹಾಜಿ ಇಸ್ಮಾಯಿಲ್ ಸೇಟರವರು ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀಮತ್ ಮಹಾರಾಜ ಸರಕಾರದವರು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷ್ನ್ 6ನೆ ಪ್ರಕರಣದ 3—4ನೆ ಕಲಂಗಳನ್ನನುಸರಿಸಿ ಈ ಕೆಳಗೆ ನಮೂದಾಗುವ ಹುಕುಂ ಮಾಡಿರುವದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟು ಇರುತ್ತೆ.

ಅವತರಣಿಕೆ.

ಚಿಕ್ಕ ಹೆಸರು.

1. ಈ ಹುಕುಂ ಮಿ|| ಹಾಜಿ ಇಸ್ಮಾಯಿಲ್ ಸೇಟರ ಮೂನೋರೇಲ್ ಹುಕುಂ ಯೆಂದು ಕರಿಯಲ್ಪಡತಕ್ಕದ್ದು.

ಅರ್ಥವಿವರಣೆ ಕಲಂ.

2. ಮೈಸೂರು ಟ್ರಾಂವೆ ರೆಗ್ಯುಲೇಷ್ನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಹರಿಸಲ್ಪಟ್ಟಿರುವ ಶಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು ಆದರೆ ಈ ಹುಕುಂನಲ್ಲಿ "ಮೂನೋರೇಲ್ ಟ್ರಾಂ ಲೈನ್" ಅಥವಾ "ಈ ಕೆಲಸ," ಎಂಬ ಉಚ್ಚಾರಣೆಗಳು ಈ ಹುಕುಂನಿಂದ ಮಂಜೂರಾಗಿರುವ ಮೂನೋರೇಲ್ ಟ್ರಾಂ ಲೈನ್ ಮತ್ತು ಕೆಲಸಗಳು ಮತ್ತು ಕಾರ್ಯಗಳಿಂದು ಅರ್ಥವಾಗತಕ್ಕದ್ದು.

ಅನ್ವಯವಾಗುವ ಷರತ್ತುಗಳು.

3. ಈ ಹುಕುಂನಿಂದ ಮಂಜೂರಾಗಿರುವ ಮೂನೋರೇಲ್ ಟ್ರಾಂ ಲೈನ್ ಎಂಬುವದು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷ್ನ ಅನುಸರಿಸಿ ಮತ್ತು ಈ ಹುಕುಂನ ನಿಬಂಧನೆಗಳಿಗೆ ಒಳಪಟ್ಟು ಹಾಕಲ್ಪಡತಕ್ಕದ್ದು, ಕಾಪಾಡಲ್ಪಡತಕ್ಕದ್ದು ಮತ್ತು ಕೆಲಸ ನಡಸಲ್ಪಡತಕ್ಕದ್ದು.

ಪ್ರಮೋಟರ್ ಯಾ ಪ್ರವರ್ತಕ.

4. ಬೆಂಗಳೂರು ಇಂಗ್ಲೀಷ್ ವೇರ್‌ಹೌಸ್ ಜನರಲ್ ಮ್ಯಾನೆಜೆಂಟ್ ಮತ್ತು ಬ್ಯಾಂಕರ್ ಮಿ|| ಹಾಜಿ ಇಸ್ಮಾಯಿಲ್ ಸೇಟರವರು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ ಯಾ ಪ್ರವರ್ತಕರಾಗಿಯು ಮತ್ತು ಈ ಹುಕುಂನಲ್ಲಿ ಪ್ರಮೋಟರ್ ಯಾ ಪ್ರವರ್ತಕನೆಂದು ಉದಹರಿಸಲ್ಪಟ್ಟಿರುವದಾಗಿಯು ಇರತಕ್ಕದ್ದು.

ಕೆಲಸ ಪ್ರಾರಂಭ.

5. ಟ್ರಾಂ ಲೈನ್ ಕೆಲಸವು ತಕ್ಷಣ ಪ್ರಾರಂಭಿಸಲ್ಪಡಬಹುದು.

ಟ್ರಾಂ ಲೈನ್ ಕೆಲಸವು ಉಪಕ್ರಮಿಸಲ್ಪಡುವದಕ್ಕೆ ಮುಂಚೆಯು ಮತ್ತು ಅದಕ್ಕೆ ಸಂಬಂಧಪಟ್ಟು ಎಲ್ಲಾ ವಿಷಯಗಳಲ್ಲಿಯು ವೆಸ್ಟರ್ನ್ ಸರಕಲ್ ಸೂಪರ್‌ಟಿಂಡಿಂಗ್ ಇಂಜನಿಯರವರ ಹುಕುಂ ಪಡಿಯಬೇಕಾದ್ದು.

6. ಪ್ರಮೋಟರ್ ಯಾ ಪ್ರವರ್ತಕನು ರಸ್ತೆ ಮೇಲ್‌ಭಾಗವನ್ನು ಅಗಿಯುವದಕ್ಕೆ ಮುಂಚೆ ಭಾಟೂ ರಸ್ತೆ ಮೇಲೆ ಹಾಕಬೇಕಾದ ಮಾರ್ಗ ಮತ್ತು ಸ್ಥಳದ ವಿಷಯದಲ್ಲಿ ವೆಸ್ಟರ್ನ್ ಸರಕಲ್ ಸೂಪರ್‌ಟಿಂಡಿಂಗ್ ಇಂಜನಿಯರವರ ಮಂಜೂರಿಯನ್ನು ಪಡಿಯತಕ್ಕದ್ದು; ಮತ್ತು ಟ್ರಾಂ ಲೈನ್‌ನಲ್ಲಿ ಉಪಯೋಗಿಸಬೇಕಾದ ಸಾಮಾನುಗಳ ವಿಷಯದಲ್ಲಿಯು ಲೈನನ್ನು ಕಟ್ಟತಕ್ಕ ವಿಧಾನದ ವಿಷಯದಲ್ಲೂ ಮತ್ತು ಅಗದ ರಸ್ತೆ ಮೇಲ್‌ಭಾಗವನ್ನು ಪುನಃ ಸರಿಪಡಿಸುವ ವಿಷಯದಲ್ಲು ಸದರಿ ಸೂಪರ್‌ಟಿಂಡಿಂಗ್ ಇಂಜನಿಯರವರು ನೇಮಿಸುವ ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು.

ಟ್ರಾಂ ಲೈನನ್ನು ಕಾಪಾಡೋಣ ಮತ್ತು ರಿಪೇರಿ ಮಾಡೋಣ, ಪ್ರಮೋಟರ್ ಯಾ ಪ್ರವರ್ತಕನ ಕರ್ತವ್ಯವಾಗಿರತಕ್ಕದ್ದು.

7. ಟ್ರಾಂಲೈನಿಗಾಗಿ ಉಪಯೋಗಿಸಲ್ಪಟ್ಟ ರಸ್ತೆ ಭಾಗವನ್ನು ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರಿಗೆ ಅಥವಾ ಅವರ ಕಡೆ ಅಧಿಕಾರ ಹೊಂದಿದ ಪ್ರತಿನಿಧಿಗೆ ಸಮರ್ಪಕವಾಗಿರುವಂತೆ ರಿಪೇರಿಯಲ್ಲಿ ಇಡತಕ್ಕದ್ದು; ಮತ್ತು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ ಯಾ ಪ್ರವರ್ತಕನು ಆ ರೀತಿ ರಿಪೇರಿ ಮಾಡಬೇಕಾದ ಮತ್ತು ಕಾಪಾಡಬೇಕಾದ ಭಾಟೂ ಮಾರ್ಗದ ಭಾಗವು ಅದರ ಹೊರ ಅಂಚಿನಿಂದ ಸದರಿ ಲೈನ್ ಮೇಲ್‌ಟ್ರಕ್ಕ ಯಾನೆ ಚಿಕ್ಕ ಚಕ್ರದ ಭಂಡಿಗಳಲ್ಲಿ ಏಸ್ತೆರವಾದದ್ದು ಅಥವಾ ವ್ಯಾಗ್ಗ ಯಾನೆ 4 ಚಕ್ರದ ಭಂಡಿಯು ಅಥವಾ ಉರುಳುವ ಸರಕು ಧಾರಾಳವಾಗಿ ಹೋಗುವದಕ್ಕೆ ಬೇಕಾದಷ್ಟು ಜಾಗದ ಹೊರಗೆ ಒಂದು ಅಡಿ ವಿಸ್ತೀರ್ಣದ ವರವಿಗಿನ ರಸ್ತೆಯನ್ನು ಆಡಿಗಿ ಇರತಕ್ಕದ್ದು.

ಟ್ರಾಂ ಲೈನ್ ಅಭಿವೃದ್ಧಿ ವಿಷಯದಲ್ಲಿ ಹುಕುಂ ಮಾಡುವದಕ್ಕೆ ಸರಕಾರದವರ ಅಧಿಕಾರ.

8. ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರು ಅಥವಾ ಅವರಕಡೆ ಅಧಿಕಾರ ಹೊಂದಿದ ಪ್ರತಿನಿಧಿಯು ಆಯಾಯ ಕಾಲದಲ್ಲಿ ಕೋರುವ ಪ್ರಕಾರ ಬಹಿರಂಗವಾದ ಜನರ ವಸತಿ ಅಥವಾ ಅನುಕೂಲಕ್ಕಾಗಿ ಅವಶ್ಯಕವಿರುವ ಮಟ್ಟಿಗೆ ಅಥವಾ ಸರಕಾರದವರು ಅವಶ್ಯಕವೆಂದು ಆಲೋಚಿಸುವ ಅಭಿವೃದ್ಧಿಗಳನ್ನು ಸದರಿ ಟ್ರಾಂ ಲೈನಿಗೆ ಕಲ್ಪಿಸತಕ್ಕದ್ದು ಮತ್ತು ಸದರಿ ರಸ್ತೆಯು ಮುಂದಣ ಬದಲಾವಣೆಗಳಿಗೆ ಅನುಕೂಲಿಸುವಂತೆ ಟ್ರಾಂ ಲೈನಿನ ಸ್ಥಳವನ್ನು ಮತ್ತು ಮಟ್ಟವನ್ನು ಬದಲಾಯಿಸತಕ್ಕದ್ದು.

9. ಸರಕಾರದವರಿಂದ ಅಥವಾ ಅವರಕಡೆ ಅಧಿಕಾರ ಹೊಂದಿದ ಪ್ರತಿನಿಧಿಯಿಂದ ಗೊತ್ತುಮಾಡಲ್ಪಡಬಹುದಾದ ಕ್ಯಾಸಿಂಗ್ಸ್ ಗಳೆಂಬ ಪಾಟುವಿಕೆಗಳನ್ನು, ಹಾದು ಹೋಗುವ ಸ್ಥಳಗಳನ್ನು, ಸೈಡಿಂಗ್ ಯಾನೆ ಪಕ್ಕದ ಲೈನ್‌ಗಳನ್ನು ಸಂಧಿ ಸ್ಥಳಗಳನ್ನು ಮತ್ತು ಇತರ ಕೆಲಸಗಳನ್ನು ಪ್ರಮೋಟರ್ ಯಾ ಪ್ರವರ್ತಕನು ವಹಿಸತಕ್ಕದ್ದು; ಮತ್ತು ಸರಕಾರದವರಿಗೆ ಯುಕ್ತವೆಂದು ಆಯಾಯ ಕಾಲದಲ್ಲಿ ತೋರುವ ಅಥವಾ ಟ್ರಾಂ ಲೈನನ್ನು ಒಳ್ಳೇ ಸ್ಥಿತಿಯಲ್ಲಿ ಇಡುವದಕ್ಕೆ ಅನುಕೂಲ ಅಥವಾ ಆವಶ್ಯಕವೆಂದು ಕಂಡುಬರುವ ಹೆಚ್ಚು ಕೆಲಸಗಳನ್ನು ಸಹಾ ವಹಿಸತಕ್ಕದ್ದು.

ಸರಕಾರದವರ ಹುಕುಂ ಪ್ರಕಾರ ಪ್ರಮೋಟರ್ ಯಾ ಪ್ರವರ್ತಕನು ಕ್ಯಾಸಿಂಗ್ಸ್ ಗಳೆಂಬ ಪಾಟುವಿಕೆಗಳು ಮೊದಲಾದ್ದನ್ನು ವಹಿಸಿಕೋಣ.

10. ಟ್ರಾಂ ಲೈನ್ ಪಟ್ಟಿತವಾಗಿರುವ ಭೂಮಿಯಲ್ಲಿ ಅಥವಾ ಮೇಲೆ ಪ್ರವೇಶಮಾಡಿ ತೋಡುಗಳು, ಜಲದಾರಿಗಳು, ನೀರಿನ ಕೊಳಾಯಿಗಳು ಟೆಲಿಗ್ರಾಫ್ ಲೈನ್ ಯಾ ತಂತಿ ಸಾಲುಗಳು ಮೊದಲಾದವುಗಳ ವಿಷಯವಾಗಿ ಅವಶ್ಯಕವಾದ ಕೆಲಸಗಳನ್ನು ಮಾಡಿಲೂ ಸ್ಥಳೀಯ ಅಧಿಕಾರಿಗು, ರಸ್ತೆಯ ಅಧಿಕಾರಿಗೂ ಅಥವಾ ಯಾವನಾದರೊಬ್ಬ ಮನುಷ್ಯನಿಗೂ ಸ್ವಾತಂತ್ರ್ಯ ಕೊಡುವ ಅಧಿಕಾರವನ್ನು ಸರಕಾರದವರು ಪುಳಿಸಿಕೊಂಡು ಇರುತ್ತಾರೆ.

ಅವಶ್ಯಕವಾದ ಕೆಲಸಗಳನ್ನು ಮಾಡುವುದಕ್ಕಾಗಿ ಟ್ರಾಂ ಲೈನ್ ವಿಷಯದಲ್ಲಿ ಪ್ರವೇಶಿಸಲು ಅಧಿಕಾರ ಕೊಡುವದಕ್ಕೆ ಸರಕಾರದವರ ಅಧಿಕಾರಗಳು.

11. ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರ ಅಥವಾ ಅವರ ಕಡೆ ಅಧಿಕಾರ ಹೊಂದಿದ ಪ್ರತಿನಿಧಿಯಿಂದ ಮೊದಲಾಗಿ ಅಪ್ಪಣೆ ಪಡೆಯದೆ ಹಾಲಿ ಇರುವ ಜಲದಾರಿ ಅಥವಾ ತೋಡು, ಟೆಲಿಗ್ರಾಫ್ ಲೈನ್ ಯಾ ತಂತಿಸಾಲು, ನೀರಿನ ಕೊಳಾಯಿ ಅಥವಾ ಯಾವುದಾದರೂ ನೇತುವೆ ಅಥವಾ ಮೊಹರಿ ಇವುಗಳ ವಿಷಯವಾಗಿ ಕೈಹಚ್ಚಕೂಡದು ಅಥವಾ ಅವುಗಳ ಸ್ಥಳವನ್ನಾಗಲಿ ಅಥವಾ ಮಟ್ಟವನ್ನಾಗಲಿ ಬದಲಾಯಿಸಕೂಡದು.

ರಸ್ತೆಯ ವಳಗೆ ಅಥವಾ ಮೇಲೆ ಇರುವ ಕಟ್ಟಡಗಳ ವಿಷಯದಲ್ಲಿ ಪ್ರವೇಶಿಸಲು ಪ್ರಮೋಟರ್ ಯಾ ಪ್ರವರ್ತಕನಿಗೆ ಅವಕಾಶ ಕೊಟ್ಟಿರುವದರ ಷರತ್ತುಗಳು.

ಉಪಯೋಗಿಸಲ್ಪಡತಕ್ಕ ಚಲನಾಶಕ್ತಿ.

12. ಈ ಟ್ರಾಂ ಲೈನಿನಮೇಲೆ ಉಪಯೋಗಿಸಲ್ಪಡತಕ್ಕ ಚಲನಾಶಕ್ತಿಯು ಕೂಲಿಗಳು, ಎತ್ತುಗಳು, ಅಥವಾ ಕುದುರೆಗಳಾಗಿರತಕ್ಕದ್ದು; ಮತ್ತು ಹವೆ ಅಥವಾ ಇತರ ಯಾವದಾದರು ಮೆಕ್ಕಾನಿಕಲ್ ಯಾ ಯಂತ್ರಿಕ ಬಲವು ಉಪಯೋಗಿಸಲ್ಪಡತಕ್ಕದ್ದಲ್ಲ.

ಟ್ರಾಂ ಲೈನ್ ಯಾವ ಉದ್ದೇಶಕ್ಕೆ ಉಪಯೋಗಿಸಲ್ಪಡತಕ್ಕದ್ದು.

13. ಈ ಟ್ರಾಂ ಲೈನ್ ಸರಕುಗಳು, ಮ್ಯಾಂಗನೀಸ್ ಎಂಬ ಲೋಹ ಮತ್ತು ಇತರ ಪದಾರ್ಥಗಳನ್ನು ಸಾಗಿಸುವದಕ್ಕೆ ಮಾತ್ರವೆ ಉಪಯೋಗಿಸಲ್ಪಡತಕ್ಕದ್ದು ಮತ್ತು ಪ್ರಯಾಣೀಕರನ್ನು ಸಾಗಿಸೋಣವು ಖಂಡಿತವಾಗಿ ನಿರೋಧಿಸಲ್ಪಟ್ಟು ಇರುತ್ತೆ.

ರಸ್ತೆಯನ್ನು ಉಪಯೋಗಿಸುವದಕ್ಕಾಗಿ ಸರಕಾರದವರಿಗೆ ಕೊಡಬೇಕಾದ ತೆರಿಗೆ.

14. ಪ್ರಮೋಟರ್ ಯಾ ಪ್ರವರ್ತಕನು ರಸ್ತೆಯನ್ನು ಉಪಯೋಗಿಸುವದಕ್ಕಾಗಿ ಈ ಮಾನೋರೇಲ್ ಮೇಲೆ ಸಾಗಿಸುವ ಮ್ಯಾಂಗನೀಸ್ ಎಂಬ ಲೋಹದ ಅದರು ಟ್ರಕ್ಕ ಯಾನೆ ಚಿಕ್ಕ ಚಕ್ರಗಳ ಭಂಡಿ ಭರ್ತಿ ಬಂದಕ್ಕೆ ಆರು ಆಣೆಗಳಂತೆ ತೆರಿಗೆಯನ್ನು ಸರಕಾರಕ್ಕೆ ಕೊಡತಕ್ಕದ್ದು; ಮತ್ತು ಇತರ ವಿಧವಾದ ಪ್ರಯಾಣಕ್ಕೆ ಅನಾನುಕೂಲವಿಲ್ಲದ ಹಾಗೆ ಈ ರೈಲ್ ಸ್ಥಾಪಿಸಲ್ಪಡತಕ್ಕದ್ದಕ್ಕು ಮತ್ತು ಅದರ ವಾಯಿದೆ ವಿಷಯದಲ್ಲಿಯು ಮೈಸೂರು ಸಂಸ್ಥಾನದ ಶ್ರೀಮಂತ ಮಹಾರಾಜಾ ಸರಕಾರದವರು ಸೇರಿಸಲ್ಪಡಬಹುದಾದ ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು.

ಶಿವಮೊಗ್ಗಾ ಮುನಿಸಿಪಾಲಿಟಿಗೆ ಕೊಡಬೇಕಾದ ತೆರಿಗೆ.

15. ಈ ಉದ್ದೇಶಿಸಲ್ಪಟ್ಟು ಇರುವ ಲೈನ್ ಮೇಲೆ ಸಾಗಿಸಲ್ಪಡುವ ಎಲ್ಲಾ ಅದರಿನ ಮೇಲೂ ಟನ್ ಒಂದಕ್ಕೆ ಒಂದಾಣೆಯಂತೆ ಸಂಕವನ್ನು ಪ್ರಮೋಟರ್ ಯಾ ಪ್ರವರ್ತಕನು ಶಿವಮೊಗ್ಗಾ ಮುನಿಸಿಪಾಲಿಟಿಗೆ ಕೊಡತಕ್ಕದ್ದು.

ಕೆಲಸವನ್ನು ಪರಾಧೀನ ಮಾಡುವಿಕೆ.

16. ಈ ಕೆಲಸವನ್ನಾಗಲಿ ಅಥವಾ ಅದರ ಯಾವ ಭಾಗವನ್ನಾಗಲಿ ಕ್ರಯ, ಅಡವು, ಗುತ್ತಿಗೆ, ಅದಲುಬದಲು ಅಥವಾ ಇತರ ವಿಧವಾಗಿಯೇ ಆಗಲಿ ಪರಾಧೀನಮಾಡಲು ಪ್ರಮೋಟರ್ ಯಾ ಪ್ರವರ್ತಕನಿಗೆ ಅಧಿಕಾರ ಕೊಡಲ್ಪಟ್ಟು ಇರುವದಿಲ್ಲ.

ಹುಕುಂ ಬರೋಜೇಜ್,
ಡಬ್ಲ್ಯೂ. ಮೆಕ್‌ಹರ್ಡೀ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಸೆಕ್ರಿಟರಿ.